ಓ ಎಸ್ ನಂ. 4/2016

ಡಿ ಡಬ್ಲ್ಯು 1

ದಿನಾಂಕ 10-06-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಕೆ ಎ ವಕೀಲರಿಂದಃ

ಲಕ್ಷ್ಮೀನಾರಾಯಣ ಮತ್ತು ರಾಮಸ್ವಾಮಿ ಶೆಟ್ರು ಹಕ್ಕು ಖುಲಾಸೆ ಮಾಡಿಕೊಳ್ಳುವ ಪೂರ್ವದಲ್ಲಿ ಪ್ರಸ್ತುತ ನಾವು ವಾಸ ಇರುವ ಮನೆಯಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ಹೌದು ಆ ಬಗ್ಗೆ ನನಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ. ಲಕ್ಷ್ಮೀನಾರಾಯಣ ಮತ್ತು ರಾಮಸ್ವಾಮಿ ಶೆಟ್ರು ನನ್ನ ಅಜ್ಜನಿಗೆ ಎರಡು ಪ್ರತ್ಯೇಕ ನೊಂದಾಯಿತ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟು ಒಟ್ಟು ಕುಟುಂಬದಿಂದ ಪ್ರತ್ಯೇಕ ಹೋಗಿರುತ್ತಾರೆ ಎಂದರೆ ಸರಿ. ಆ ರೀತಿ ಅವರಿಬ್ಬರೂ ಒಟ್ಟು ಕುಟುಂಬದಿಂದ ಹೊರಗೆ ಹೋದ ನಂತರ ನನ್ನ ಅಜ್ಜ, ನನ್ನ ತಂದೆ ಕೆ ಎ ಸಚ್ಚಿದಾನಂದ ಮತ್ತು ವಾದಿ ನಟರಾಜು ಹಾಗೂ 14 ನೇ ಪ್ರತಿವಾದಿ ವರದರಾಜುರವರು ದಾವಾ ಐಟಂ ನಂ.8 ರ ಮನೆಯಲ್ಲಿಯೇ ವಾಸಿಸಿಕೊಂಡಿರುತ್ತಾರೆ ಎಂದರೆ ಸರಿ. 14 ನೇ ಪ್ರತಿವಾದಿ ವರದರಾಜುರವರು ಅವರ ವಿವಾಹವಾದ ನಂತರ ದಾವಾ ಐಟಂ ನಂ.8 ರ ಮನೆಯಲ್ಲಿಯೇ ಪ್ರತ್ಯೇಕವಾಗಿ ಅಡುಗೆ ಮಾಡಿಕೊಂಡು ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. 14 ನೇ ಪ್ರತಿವಾದಿ ಪ್ರತ್ಯೇಕವಾಗಿ ಗ್ಯಾಸ್ ಕನೆಕ್ಷನ್ ಸಹ ಪಡೆದಿದ್ದರೂ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರಿಗೆ

ಒಂದೇ ಗ್ಯಾಸ್ ಕನೆಕ್ಷನ್ ಇದ್ದು ಒಂದೇ ಒಲೆಯಲ್ಲಿ ಅಡುಗೆ ಆಗುತ್ತದೆ ಎಂದು ನುಡಿಯುತ್ತಾರೆ. ನಂತರದ ದಿನಗಳಲ್ಲಿ 14 ನೇ ಪ್ರತಿವಾದಿ ದಾವಾ ಐಟಂ ನಂ.17 ರ ಮನೆಯನ್ನು ಕೊಂಡುಕೊಂಡಿದ್ದು ಆ ಮನೆಯಲ್ಲಿ ಪ್ರತ್ಯೇಕವಾಗಿ ವಾಸ್ತವ್ಯ ಹೂಡಲು ಹೋಗಿರುತ್ತಾರೆ ಎಂದರೆ ಸಾಕ್ಷಿ ಆ ಮನೆಯನ್ನು ನನ್ನ ತಾತ ಕೊಡಿಸಿದ್ದು, ಆದರೆ 14 ನೇ ಪ್ರತಿವಾದಿ ನಮ್ಮ ಜತೆಗೆ ವಾಸ ಇದ್ದು ಪ್ರತ್ಯೇಕವಾಗಿ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯಾದ ನಟರಾಜುರವರು ಬೀರೂರಿನ ಆಂಜನೇಯ ದೇವಾಲಯದ ಹಿಂಭಾಗದಲ್ಲಿ ಒಂದು ಪ್ರತ್ಯೇಕ ಮನೆ ಕೊಂಡುಕೊಂಡು ಅಲ್ಲಿ ಪ್ರತ್ಯೇಕವಾಗಿ ವಾಸ್ತವ್ಯ ಹೂಡಿರುತ್ತಾರೆ ಎಂದರೆ ಸರಿ.

ಲಕ್ಷ್ಮೀನಾರಾಯಣ ಮತ್ತು ರಾಮಸ್ವಾಮಿ ಶೆಟ್ರು ನನ್ನ ತಾತನ ಹೆಸರಿಗೆ ಬರೆದುಕೊಟ್ಟ ಹಕ್ಕು ಖುಲಾಸೆ ಪತ್ರವನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನನ್ನ ವಕೀಲರಿಗೆ ನೀಡಿದ್ದೆ ಹಾಜರುಪಡಿಸಿರಬೇಕು ಎಂದು ನುಡಿಯುತ್ತಾರೆ. ಸಾಕ್ಷಿ ನಿಡಿ-1 ರಿಂದ 6 ದಾಖಲೆಗಳನ್ನು ತೋರಿಸಿ ಸದರಿ ಹಕ್ಕು ಖುಲಾಸೆ ಪತ್ರ ಯಾವುದು ಎಂದು ಕೇಳಲಾಗಿ ಸಾಕ್ಷಿ ದಾಖಲೆಗಳನ್ನು ನೋಡಿ ಅದರಲ್ಲಿ ಹಕ್ಕು ಖುಲಾಸೆ ಪತ್ರ ಇಲ್ಲ ಎಂದು ನುಡಿಯುತ್ತಾರೆ. ಸದರಿ ಹಕ್ಕು ಖುಲಾಸೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು ಎಂದರೆ ಸಾಕ್ಷಿ ಇದ್ದರೆ ಹಾಜರುಪಡಿಸಬಹುದು ಎಂದು ನುಡಿಯುತ್ತಾರೆ. ನನ್ನ ಅಜ್ಜ ಅಶ್ವತನಾರಾಯಣ ಶೆಟ್ಟಿರವರ

ಮರಣದ ನಂತರ ಸದರಿ ಹಕ್ಕು ಖುಲಾಸೆ ಪತ್ರಗಳು ನನ್ನ ತಂದೆಯ ಬಳಿ ಇದ್ದು ಅವುಗಳನ್ನು ಉದ್ದೇಶಪೂರ್ವಕವಾಗಿಯೇ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ದಾಖಲೆಗಳು ನನ್ನ ತಂದೆ ಬಳಿ ಇಲ್ಲ, ವಕೀಲರ ಬಳಿ ಇರಬೇಕು ಎಂದು ನುಡಿಯುತ್ತಾರೆ. ಸತ್ಯಾಂಶ ಮರೆಮಾಚುವ ಉದ್ದೇಶದಿಂದಲೇ ಸದರಿ ಹಕ್ಕು ಖುಲಾಸೆ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.11 ರಿಂದ 18ರ ಆಸ್ತಿಗಳು ಒಟ್ಟು ಕುಟುಂಬಕ್ಕೆ ಸೇರಿದ್ದು ಎಂದು ಸಾಬೀತು ಪಡಿಸಲು ನ್ಯಾಯಾಲಯಕ್ಕೆ ಪೂರಕ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ವಕೀಲರ ಬಳಿ ಕೇಳಿ ತಿಳಿದುಕೊಳ್ಳಬೇಕು ಎಂದು ನುಡಿಯುತ್ತಾರೆ. ದಾವೆ ಹೂಡುವ ಸಮಯದಲ್ಲಿ ವಾದಿ ನಟರಾಜುರವರು ದಾವಾ ಐಟಂ ನಂ.1 ರಿಂದ 10ರ ಆಸ್ತಿಗಳು ಮಾತ್ರ ಒಟ್ಟು ಕುಟುಂಬದ ಆಸ್ತಿ ಎಂದು ದಾವೆ ಹೂಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಸೇರಿದ ದಾವಾ ಐಟಂ ನಂ.1, 2 ಮತ್ತು 10 ಆಸ್ತಿಗಳನ್ನು ಸಹ ಸೇರಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗೆ 14ನೇ ಪ್ರತಿವಾದಿ ಬೆಂಬಲವಾಗಿ ನಿಂತಿದ್ದರಿಂದ ನನ್ನ ತಂದೆ ತನ್ನ ತಕರಾರು ಸಲ್ಲಿಸುವ ಸಮಯದಲ್ಲಿ ಅವರಿಗೆ ಸೇರಿದ ದಾವಾ ಐಟಂ ನಂ.11 ರಿಂದ 18ರ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳೆಂದು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.11 ರಿಂದ

18 ರ ಆಸ್ತಿಗಳು 14 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುವುದರಿಂದಲೇ ಅವು ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ್ದು ಎಂದು ರುಜುವಾತು ಪಡಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಲಕ್ಷ್ಮೀನಾರಾಯಣ ಮತ್ತು ರಾಮಸ್ವಾಮಿ ಶೆಟ್ರು ರವರು ನನ್ನ ಅಜ್ಜನಿಗೆ ಹಕ್ಕು ಖುಲಾಸೆ ಪತ್ರಗಳನ್ನು ಮಾಡಿಕೊಡುವ ಮೊದಲಿನಿಂದಲೂ ಪ್ರತ್ಯೇಕವಾಗಿ ಸ್ವತಂತ್ರವಾಗಿ ವ್ಯಾಪಾರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಲಕ್ಷ್ಮೀನಾರಾಯಣ ಮತ್ತು ರಾಮಸ್ವಾಮಿ ಶೆಟ್ರುರವರು ವಯಸ್ಕರಾದ ನಂತರ ಸ್ವತಂತ್ಯ ವ್ಯಾಪಾರ ಮತ್ತು ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಸಹ ವಯಸ್ಕರಾದ ನಂತರ ಸ್ವತಂತ್ರವಾಗಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. 14 ನೇ ಪ್ರತಿವಾದಿ 1966 ರಲ್ಲಿ ಹೋಮ್ ಗಾರ್ಡ ಸೇವೆಗೆ ಸೇರಿದ್ದರು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 1966 ರಿಂದ 1996 ರವರೆಗೂ 14 ನೇ ಪ್ರತಿವಾದಿ ಹೋಮ್ ಗಾರ್ಡಾಗಿ ವಿವಿಧ ಹುದ್ದೆಗಳನ್ನು ಸ್ವೀಕರಿಸಿ ಪ್ಲ್ಯಾಟ್ಯೂನ್ ಕಮಾಂಡರಾಗಿ ಸೇವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹೋಮ್ ಗಾರ್ಡ ಕೆಲಸ ಅರೇಕಾಲಿಕ ನೌಕರಿಯಾಗಿದ್ದು ಅವಶ್ಯಕತೆ ಇದ್ದಾಗ ಮಾತ್ರ ಸರ್ಕಾರದವರು ಕರೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 1976 ರಲ್ಲಿ 14 ನೇ ಪ್ರತಿವಾದಿ ಸರ್ಕಾರದಿಂದ ನ್ಯಾಯಬೆಲೆ ಅಂಗಡಿಯ ಪರವಾನಿಗಿ ಪಡೆದಿದ್ದರು

ಎಂದರೆ ಸಾಕ್ಷಿ ಒಟ್ಟು ಕುಟುಂಬದ ಸದಸ್ಯರ ಪರವಾಗಿ ಅವರು ಪರವಾನಿಗಿ ಪಡೆದಿದ್ದರು ಎಂದು ನುಡಿಯುತ್ತಾರೆ. ದಿನಾಂಕ 29/04/1976 ರಂದು ಜಿಲ್ಲಾಧಿಕಾರಿಯವರು 14 ನೇ ಪ್ರತಿವಾದಿ ಹೆಸರಿಗೆ ಪರವಾನಿಗಿ ನೀಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಪರವಾಗಿ ಅವರ ಹೆಸರಿಗೆ ಪರವಾನಿಗಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. 1976 ರಲ್ಲಿ ನನ್ನ ಅಜ್ಜ ಕಿರಾಣಿ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ. 14 ನೇ ಪ್ರತಿವಾದಿ ನ್ಯಾಯಬೆಲೆ ಅಂಗಡಿಯನ್ನು ದೇವಾಲಯದ ಒಂದು ಅಂಗಡಿ ಮಳಿಗೆಯಲ್ಲಿ ನಡೆಸುತ್ತಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇರುವ ಪ್ರಕಾರ ನ್ಯಾಯಬೆಲೆ ಅಂಗಡಿ ನನ್ನ ಅಜ್ಜನ ಕಿರಾಣಿ ಅಂಗಡಿಯಲ್ಲಿ ನಡೆಯುತ್ತಿತ್ತು ಎಂದು ನುಡಿಯುತ್ತಾರೆ. ಈಗಲೂ ಸಹ 14 ನೇ ಪ್ರತಿವಾದಿ ಹೆಸರಿನಲ್ಲಿ ನ್ಯಾಯಬೆಲೆ ಅಂಗಡಿ ನಡೆಯುತ್ತಿದೆ ಎಂದರೆ ಸರಿ. ಪ್ರಸ್ತುತ ಸದರಿ ನ್ಯಾಯಬೆಲೆ ಅಂಗಡಿ ಎಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದರೆ ಸಾಕ್ಷಿ ದಾವಾ ಐಟಂ ನಂ.8 ರ ಮನೆಯ ಎದುರುಭಾಗದಲ್ಲಿರುವ ಮಳಿಗೆಯಲ್ಲಿ ನಡೆಯುತ್ತಿದೆ ಎಂದು ನುಡಿಯುತ್ತಾರೆ. ಸದರಿ ನ್ಯಾಯಬೆಲೆಯ ಅಂಗಡಿಯ ಜಾಗ 14 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿದ್ದಾಗ ಕೊಂಡುಕೊಂಡಿದ್ದು ಎಂದು ನುಡಿಯುತ್ತಾರೆ. ಸದರಿ ನ್ಯಾಯಬೆಲೆ ಅಂಗಡಿಯನ್ನು ದಾವಾ ಐಟಂ ನಂ.15 ರ ಆಸ್ತಿಯಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಅಸೆಸ್ಮೆಂಟ್ ಸಂಖ್ಯೆಯಿಂದ

ನಿಖರವಾಗಿ ಗೊತ್ತಾಗುತ್ತಿಲ್ಲ ಆದರೆ ಸದರಿ ಅಂಗಡಿ ಮಳಿಗೆಯ ಎದುರುಭಾಗದಲ್ಲಿ ಹಳೇ ಅಜ್ಜಂಪುರ ರಸ್ತೆ, ಬಲಭಾಗಕ್ಕೆ ಹರೀಶ್ ಜ್ಯುವೆಲರ್ಸ್, ಎಡಭಾಗಕ್ಕೆ ನನ್ನ ತಂದೆಯ ಸೈಟು ಮತ್ತು ಹಿಂಭಾಗಕ್ಕೆ ನಿಂಗಮ್ಮರವರ ಸೈಟು ಬರುತ್ತದೆ, ಚಕ್ಕುಬಂದಿ ನನಗೆ ಸರಿಯಾಗಿ ತಿಳಿಯುತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.15 ರ ಆಸ್ತಿಯನ್ನು 14 ನೇ ಪ್ರತಿವಾದಿ ನಿಂಗಮ್ಮರವರಿಂದ ಎರಡು ಪ್ರತ್ಯೇಕ ಕ್ರಯಪತ್ರಗಳ ಮೂಲಕ 1984 ಮತ್ತು 1987 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಇರಬಹುದು, ಆದರೆ ಒಟ್ಟು ಕುಟುಂಬದಲ್ಲಿ ಕೊಂಡುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.15 ರ ಆಸ್ತಿಯಲ್ಲಿ ಮಳಿಗೆ ಕಟ್ಟಿಕೊಂಡು 14 ನೇ ಪ್ರತಿವಾದಿ ಅಂದಿನಿಂದ ನ್ಯಾಯಬೆಲೆ ಅಂಗಡಿ ನಡೆಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ನಾವೆಲ್ಲರೂ ಸಹ ಆ ಅಂಗಡಿಯನ್ನು ನಡೆಸಿರುತ್ತೇವೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.